# ಆರು ಕಾಲಗಳು

■ ವಾಸುದೇವ ಶರ್ಮಾ ಎನ್.ವಿ.
ಕಲೆ: ಶ್ರೀಕೃಷ್ಣ ಕೆದಿಲಾಯ




ಹೂಗಳ ಅರಳಿಸಿ
ಬಣ್ಣವ ಚಿಮುಕಿಸಿ
ಎಲ್ಲೆಡೆ ಕೆಂದಳಿರನು ಚಿಗುರಿಸಿ
ನಲಿನಲಿಸುವ
ವಸಂತ ಕಾಲ

ಅಬ್ಬಾ ಬಿಸಿಲು
ನೆತ್ತಿಯ ಕಾಯಿಸೋ ಸುಡುಸುಡು
ಬೆವರಳಿಯುವ ಧಗೆಯು
ಒಣಗಿದ ನೆಲ ಬಾಯ್ಬಿರಿಸುವ
ಗ್ರೀಷ್ಮ ಕಾಲ

ಬಂದಿತೋ ಬಂದಿತು
ಮುಂಗಾರಿನ ಧೋಧೋ
ಸುರಿದಿದೆ ಮುಗಿಲಿನ ಧಾರೆ
ಗಿಡ ಮರ ಪ್ರಾಣಿಗೆ ಜೀವವ ನೀಡುವ
ವರ್ಷಾ ಕಾಲ

ತುಂಬಿದೆ ಕಟ್ಟೆ ಕೆರೆ ಕಾಲುವೆ
ನೀರೂ ಹರಿಯುತ ಸಡಗರ ಪಡುತಿರೆ
ನಾಳೆಯ ಹಸಿರಿಗೆ ಬದುಕಿನ ಉಸಿರಿಗೆ
ಖಾತರಿ ಪಡಿಸುವ
ಶರತ್ ಕಾಲ

ಮರಮರದೆಲೆಗಳ ಉದುರಿಸಿ ರಾಶಿ
ಚಳಿಯನು ಹೊದಿಸುತ
ಚುಮುಚುಮು ಹಿತದಲಿ
ಸೂರ್ಯನ ಕೂಡ ತಂಪಾಗಿಸುವ
ಹೇಮಂತ ಕಾಲ

ಗಡಗಡ ಗಡಗಡ
ಭೂಮಿಗೆ ಭೂಮಿಯೇ ಅದುರುವುದೇನು
ಮಂಜಿನ ಮಳೆಯಲಿ ಹಿಮರಾಶಿಯಲಿ
ಅಡಗಿಸಿ ನಡುಗಿಸುವ
ಶಿಶಿರ ಕಾಲ

### ಋತು(ಕಾಲ) ಮತ್ತು ಮಾಸ (ತಿಂಗಳು)

ವಸಂತಕಾಲ: ಚೈತ್ರ, ವೈಶಾಖ (ಏಪ್ರಿಲ್, ಮೇ, ಜೂನ್)
ಗ್ರೀಷ್ಮಕಾಲ: ಜ್ಯೇಷ್ಠ, ಆಷಾಢ (ಜೂನ್, ಜುಲೈ, ಆಗಸ್ಟ್)
ವರ್ಷಾಕಾಲ: ಶ್ರಾವಣ, ಭಾದ್ರಪದ (ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್)
ಶರತ್‌ಕಾಲ: ಆಶ್ವಯುಜ, ಕಾರ್ತೀಕ (ಅಕ್ಟೋಬರ್, ನವೆಂಬರ್, ಡಿಸೆಂಬರ್)
ಹೇಮಂತಕಾಲ: ಮಾರ್ಗಶಿರ, ಪುಷ್ಯ (ಡಿಸೆಂಬರ್, ಜನವರಿ, ಫೆಬ್ರುವರಿ)
ಶಿಶಿರಕಾಲ: ಮಾಘ, ಫಾಲ್ಗುಣ (ಫೆಬ್ರುವರಿ, ಮಾರ್ಚ್, ಏಪ್ರಿಲ್)

---

## ಕುಂಚ ಪ್ರಪಂಚ



**ಅಚಿಂತ್ಯ ವಿಜಯ್**
ಯುಕೆಜಿ,
ಎನ್‌ಪಿಎಸ್ ಪಬ್ಲಿಕ್ ಸ್ಕೂಲ್, ಬೆಂಗಳೂರು







**ಸ್ವಾತಿ ಎಸ್. ಜಿ.**
5ನೇ ತರಗತಿ,
ಕವಲಕ್ಕಿ, ಹೊನ್ನಾವರ





**ಶ್ರೀಹಿತ್ ಕುಲಕರ್ಣಿ**
2ನೇ ತರಗತಿ,
ಅರುಣೋದಯ ಪಬ್ಲಿಕ್ ಸ್ಕೂಲ್, ಥಾಣೆ

'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:**
editorsu@sudha.co.in